ಕನ್ನಡ ಮತ್ತು ಹಿಂದಿ ಭಾಷಾ ವಿಭಾಗ

# "ಜಾನಪದ ಸಾಹಿತ್ಯ ಮತ್ತು ವರ್ತಮಾನ"

हिन्दी और कन्नड विभाग

# कृष्णा सोबती का रचना संसार




ಪ್ರಧಾನ ಸಂಪಾದಕರು

ರೇ.ಫಾ. ಡಾ. ಸಾಬುಜಾರ್ಜ್, ಪ್ರಾಂಶುಪಾಲರು

ಸಂಪಾದಕರು

ಶ್ರೀ ಮಾದೇಶ್ ಎನ್., ಮುಖ್ಯಸ್ಥರು, ಭಾಷಾ ವಿಭಾಗ,

ಡಾ. ಬಸವರಾಜು ಎಮ್. ಪ್ರಾಧ್ಯಾಪಕರು

# ಜಾನಪದ ಕಲೆಗಳು ಮತ್ತು ವರ್ತಮಾನ

ಪ್ರೊ.ಪಾತಯ್ಯ ಎನ್
ಸಹಾಯಕ ಪ್ರಾಧ್ಯಾಪಕರು, ಕೆ.ಎಲ್.ಇ ಸಂಸ್ಥೆಯ ಎಸ್.ನಿಜಲಿಂಗಪ್ಪ ಕಾಲೇಜು,
ರಾಜಾಜಿನಗರ, ಬೆಂಗಳೂರು-10

ಮಾನವನ ಹುಟ್ಟಿನೊಂದಿಗೆ ಜನಪದ ಕಥೆಯೂ ಪ್ರಾರಂಭವಾಗುತ್ತದೆ. ಮಾನವನ ಜೀವನವೇ ಒಂದು ರೀತಿಯ ಕಥೆಯಾಗಿದೆ. ಜನರ ಮತ್ತು ಜನಪದ ಸಮೂಹಗಳು ಒಂದು ಬಗೆಯ ಭಾವನಾತ್ಮಕ ಕಲ್ಪನೆಗಳೇ ಜನಪದ ಕಥೆಗಳು. ಮಾತು ಕಲಿತ ಮನುಷ್ಯ ಮಾತಿನ ಮಹಿಮೆಯನ್ನು ತಿಳಿದು ಆ ಮಹಿಮೆಯನ್ನು ಅವನ ವಿವಿಧ ರೀತಿಯ ರಸಭಾವಗಳ ವರ್ಣನೆಯಾಯಿತು. ಅವನ ಕಲ್ಪನೆಯೇ ಸಹಜ ಚಿತ್ರಣವಾಯಿತು ಮತ್ತು ಕತೆಯಾಗಿ ಅವನ ನಾಲಿಗೆಯಿಂದ ಧುಮುಕಿತು ಕೇಳುಗರ ಹೃದಯವನ್ನು ಮನಸ್ಸನ್ನು ಮುಟ್ಟಿತು. ಸಮಷ್ಟಿಯ ರೂಪದಲ್ಲಿ ಹರಿಯಿತು. ಜನಪದರ ಜೀವದನಲ್ಲಿ ಹರಡಿ ಜನಪದ ಕಥಾ ಸಂಪತ್ತಾಯಿತು, ಸಾಗರವಾಯಿತು. ಮಂಗ ಮಾನವನಾಗಿ ಮಾತಿನ ಮಹತ್ವವನ್ನು ಅರಿತ ಸಮಯದಿಂದಲೇ ಈ ಕಥೆಗಳ ಉಗಮ. ಅಂದಿನಿಂದ ಇಂದಿನ ತನಕ ಜನರ ಬಾಯಿಂದ ಬಾಯಿಗೆ ಮುಟ್ಟಿ ಮನಸ್ಸಿನ ಗುಡಿಯಲ್ಲಿ ತಾಗಿ ಪರಂಪರಾನುಗತವಾಗಿ ಹರಿದು ಬಂದು ಜನಪದ ಕಥೆಗಳಾದವು. ಹಾಗೆಯೇ ಇವು ಪ್ರಾಚೀನ ಮಾನವನ ಸಂಪ್ರದಾಯ ಮತ್ತು ಸಂಸ್ಕೃತಿಯ ಪ್ರತೀಕಗಳಾದವು.

ಸಾಮಾನ್ಯವಾಗಿ ಜನಪದ ಕಥೆಗಳು ಮೂಲತ: ಅವನ ವೈಯಕ್ತಿಕವಾಗಿಯೂ ಸಾಮಾಜಿಕ ಅವಶ್ಯಕತೆಯ ಫಲವಾಗಿದೆ. ಪ್ರತಿನಿತ್ಯ ದುಡಿಮೆಯನ್ನು ಮಾಡಿ ಆಯಾಸವನ್ನು ಕಡಿಮೆಗೊಳಿಸಲು ಸಲುವಾಗಿ ಹಾಗೆಯೇಬಿಡುವಿನ ಸಮಯವನ್ನು ನಿರಾಳವಾಗಿ ಕಳೆಯುವುದಕ್ಕೆ, ಮನಸ್ಸಿಗೆ ಬೇಸರವಾದಾಗ ಅದಕ್ಕೆ ಮನರಂಜನೆ ಒದಗಿಸುವ ಸಲುವಾಗಿ